KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in
Pavate Nagar,Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2014

website: kud.ac.in

No. KU/Aca(S&T)/SSL-436/2023-24/844 Date: 14 AUG 2023

## ಪರಿಷ್ಕೃತ ಸುತ್ತೋಲೆ–5

ವಿಷಯ: 2023–24ನೇ ಸಾಲಿನ ಸ್ನಾತಕ ಪದವಿ 1ನೇ ಸೆಮಿಸ್ಟರ್‌ನ ತರಗತಿಗಳ ಪ್ರಾರಂಭ ದಿನಾಂಕವನ್ನು ಪರಿಷ್ಕೃತ ಶೈಕ್ಷಣಿಕ ಪ್ರವೇಶದ ವೇಳಾಪಟ್ಟಿ ಕುರಿತು.

ಉಲ್ಲೇಖ:1. ಕಚೇರಿ ಸುತ್ತೋಲೆ ಸಂ.KU/Aca(S&T)/SSL-417/UGCE/2023-24/14, ದಿ:25.05.2023.
2. ಕಚೇರಿ ಸುತ್ತೋಲೆ ಸಂ. KU/Aca(S&T)/SSL-417/UGCE/2023-24/40, ದಿನಾಂಕ 15.07.2023.
3. ಸರ್ಕಾರದ ಆದೇಶ ಸಂ.ಇಡಿ/80ಯುಎನ್‌ಇ 2023, ಬೆಂಗಳೂರು, ದಿನಾಂಕ: 17.07.2023.
4. ಕಚೇರಿ ಸುತ್ತೋಲೆ ಸಂ. KU/Aca(S&T)/SSL-417/UGCE/2023-24/724,ದಿನಾಂಕ 24.07.2023
5. ಕಚೇರಿ ಸುತ್ತೋಲೆ ಸಂ. KU/Aca(S&T)/SSL-417/UGCE/2023-24/44,ದಿನಾಂಕ 24.07.2023
6. ಕಚೇರಿ ಸುತ್ತೋಲೆ ಸಂ. KU/Aca(S&T)/SSL-417/UGCE/2023-24/45,ದಿನಾಂಕ 05.08.2023
7. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 14/8/2023

------

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳ ಗಮನಕ್ಕೆ ತರಬಯಸುವುದೇನೆಂದರೆ, ತಾಂತ್ರಿಕ ತೊಂದರೆಯಿಂದ 2023–24ನೇ ಸಾಲಿನ ಸ್ನಾತಕ ಪದವಿಗಳ 1ನೇ ಸೆಮಿಸ್ಟರ್‌ನ ತರಗತಿಗಳ ಪ್ರಾರಂಭ ದಿನಾಂಕ: 16.08.2023 ರಂದು ಇರುವುದನ್ನು ದಿನಾಂಕ: 03.10.2023ಕ್ಕೆ ಮುಂದೂಡಲಾಗಿದೆ. ಹಾಗೂ 1ನೇ ಸೆಮಿಸ್ಟರ್‌ಗೆ ವಿಶೇಷ ದಂಡ ರೂ. 4,670/– ದೊಂದಿಗೆ ಪ್ರವೇಶದ ಕೊನೆಯ ದಿನಾಂಕ: 29.09.2023ಕ್ಕೆ ನಿಗದಿಪಡಿಸಲಾಗಿದೆ. ವಿವರಗಳಿಗಾಗಿ ಇದಕ್ಕೆ ಲಗತ್ತಿಸಿದ ವೇಳಾಪಟ್ಟಿಯನ್ನು ಗಮನಿಸುವುದು. ಕಾರಣ, ಸಂಬಂಧಪಟ್ಟ ಪ್ರಾಚಾರ್ಯರು ಸದರ ಪರಿಷ್ಕೃತ ವೇಳಾಪಟ್ಟಿಯನ್ನು ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಗಮನಕ್ಕೆ ತಪ್ಪದೆ ತರುವುದು.

ಅಡಕ: ಮೇಲಿನಂತೆ.

ಕುಲಸಚಿವರು

ಗೆ,

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.

**ಪ್ರತಿ:**

1. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
2. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
3. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
4. ಅಧೀಕ್ಷಕರು, ಪ್ರಶ್ನೆ ಪತ್ರಿಕೆ / ಗೌಪ್ಯ / ಜಿ.ಎ.ಡಿ. / ವಿದ್ಯಾಂಡಳ (ಪಿ.ಜಿ.ಪಿಎಚ್.ಡಿ) ವಿಭಾಗ, ಸಂಬಂಧಿಸಿದ ಕೋರ್ಸುಗಳ ವಿಭಾಗಗಳು ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ (CDC) / ವಿದ್ಯಾರ್ಥಿ ಕಲ್ಯಾಣ ವಿಭಾಗ, UUCMS Cell, ನಿರ್ದೇಶಕರು, ಐ.ಟಿ. ವಿಭಾಗ, ಕ.ವಿ.ವಿ. ಧಾರವಾಡ.

## ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

## NEP ಅಡಿಯಲ್ಲಿ ಎಲ್ಲ ಸ್ನಾತಕ ಪದವಿ ತರಗತಿಗಳಿಗೆ 1ನೇ ಸೆಮಿಸ್ಟರ್‌ನ

## ಪರಿಷ್ಕೃತ ಶೈಕ್ಷಣಿಕ ವೇಳಾಪಟ್ಟಿ–5: 2023–24

| ಕ್ರ.ಸಂ. | ವಿವರ | ದಿನಾಂಕ |
|---|---|---|
| 1 | NEP ಅಡಿಯಲ್ಲಿ ಪದವಿ ತರಗತಿಗಳ 1ನೇ ಸೆಮಿಸ್ಟರ್ ಪ್ರವೇಶಕ್ಕೆ UUCMS ಮುಖಾಂತರ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಹಾಗೂ ಮಹಾವಿದ್ಯಾಲಯಗಳು ದಂಡ ರಹಿತ ಪ್ರವೇಶ ಪಡೆದುಕೊಳ್ಳುವ ಅವಧಿ | 25.05.2023 to 03.08.2023 |
| 2 | NEP ಅಡಿಯಲ್ಲಿ ಪದವಿ ತರಗತಿಗಳ **1ನೇ** ಸೆಮಿಸ್ಟರ್ ತರಗತಿಗಳಿಗೆ **ರೂ. 670/– ರಂತೆ ದಂಡದೊಂದಿಗೆ** ಪ್ರವೇಶ ಪಡೆಯುವ ಅವಧಿ | 04.08.2023 to 07.08.2023 |
| 3 | NEP ಅಡಿಯಲ್ಲಿ ಪದವಿ ತರಗತಿಗಳ **1ನೇ** ಸೆಮಿಸ್ಟರ್ ತರಗತಿಗಳಿಗೆ **ಹೆಚ್ಚುವರಿ ದಂಡ ರೂ. 4670/– ರಂತೆ** ಪ್ರವೇಶ ಪಡೆಯುವ ಅವಧಿ | 08.08.2023 to 29.09.2023 |
| 4 | ದಂಡ ರಹಿತ, ದಂಡಸಹಿತ ಮತ್ತು ಹೆಚ್ಚುವರಿ ದಂಡದೊಂದಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಪ್ರವೇಶ ಯಾದಿಯನ್ನು ಕ್ರಮ ಸಂಖ್ಯೆ 1 ರಿಂದ 3 ರಂತೆ UUCMS ನಲ್ಲಿ ಶುಲ್ಕವನ್ನು ಭರಣಾ ಮಾಡಿದ ಯಾದಿ ಹಾಗೂ ನಿಗದಿತ ಅವಶ್ಯಕ ಅನುಬಂಧ (Annexure) (3 ರಿಂದ 8) / ದಾಖಲೆಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ಕೊನೆಯ ದಿನಾಂಕ | 03.10.2023 |
| 5 | **ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ NEP ಅಡಿಯಲ್ಲಿ ಪದವಿ ತರಗತಿಗಳ 1ನೇ ಸೆಮಿಸ್ಟರ್ ಶೈಕ್ಷಣಿಕ ವರ್ಷ ಪ್ರಾರಂಭದ ದಿನಾಂಕ** | 03.10.2023 |
| 6 | NEP ಅಡಿಯಲ್ಲಿ ಪದವಿ ತರಗತಿಗಳ **1ನೇ** ಸೆಮಿಸ್ಟರ್ **ಮೊದಲನೇ ಟರ್ಮಿನ ತರಗತಿಗಳ ಹಾಗೂ ಅಧ್ಯಾಪಕರ ಕೆಲಸದ ಮುಕ್ತಾಯದ ದಿನಾಂಕ ಹಾಗೂ ಮುಂದಿನ ದಿನಾಂಕದಿಂದ ರಜೆ ಪ್ರಾರಂಭ (ಕೆಲಸ ಮುಕ್ತಾಯದ ಕೊನೆಯ ದಿನಾಂಕದೊಳಗೆ ವಿಶ್ವವಿದ್ಯಾಲಯದ ಪ್ರಾಯೋಗಿಕ ಪರೀಕ್ಷೆಗಳನ್ನು ಮುಕ್ತಾಯಗೊಳಿಸತಕ್ಕದ್ದು)** | 24.01.2024 |
| 7 | NEP ಅಡಿಯಲ್ಲಿ ಪದವಿ ತರಗತಿಗಳ **1ನೇ** ಸೆಮಿಸ್ಟರ್ ಥಿಯರಿ ಪರೀಕ್ಷೆ ಮತ್ತು ಉತ್ತರ ಪತ್ರಿಕೆ ಮೌಲ್ಯಮಾಪನದ ಅವಧಿ<br>**ವಿ.ಸೂ.: ಪರೀಕ್ಷಾ ಅವಧಿಯಲ್ಲಿ ಅಧ್ಯಾಪಕರು ಪರೀಕ್ಷಾ ಕಾರ್ಯವನ್ನು ಕಡ್ಡಾಯವಾಗಿ ನಿರ್ವಹಿಸುವುದು.** | 25.01.2024 to 23.02.2024 |
| 8 | NEP ಅಡಿಯಲ್ಲಿ ಪದವಿ ತರಗತಿಗಳ **2ನೇ** ಸೆಮಿಸ್ಟರ್ **ಅಧ್ಯಾಪಕರ ಕೆಲಸದ ಪ್ರಾರಂಭದ ದಿನಾಂಕ** | 26.02.2024 |
| 9 | NEP ಅಡಿಯಲ್ಲಿ ಪದವಿ ತರಗತಿಗಳ **2ನೇ** ಸೆಮಿಸ್ಟರ್ ಎರಡನೇ **ಟರ್ಮಿನ ತರಗತಿಗಳ ಹಾಗೂ ಅಧ್ಯಾಪಕರ ಕೆಲಸದ ಮುಕ್ತಾಯದ ದಿನಾಂಕ ಹಾಗೂ ಮುಂದಿನ ದಿನಾಂಕದಿಂದ ರಜೆ ಪ್ರಾರಂಭ (ಕೆಲಸ ಮುಕ್ತಾಯದ ಕೊನೆಯ ದಿನಾಂಕದೊಳಗೆ ವಿಶ್ವವಿದ್ಯಾಲಯದ ಪ್ರಾಯೋಗಿಕ ಪರೀಕ್ಷೆಗಳನ್ನು ಮುಕ್ತಾಯಗೊಳಿಸತಕ್ಕದ್ದು)** | 15.06.2024 |
| 10 | NEP ಅಡಿಯಲ್ಲಿ ಪದವಿ ತರಗತಿಗಳ **2ನೇ** ಸೆಮಿಸ್ಟರ್ ಥಿಯರಿ ಪರೀಕ್ಷೆ ಮತ್ತು ಉತ್ತರ ಪತ್ರಿಕೆ ಮೌಲ್ಯಮಾಪನದ ಅವಧಿ<br>**ವಿ.ಸೂ.: ಪರೀಕ್ಷಾ ಅವಧಿಯಲ್ಲಿ ಅಧ್ಯಾಪಕರು ಪರೀಕ್ಷಾ ಕಾರ್ಯವನ್ನು ಕಡ್ಡಾಯವಾಗಿ ನಿರ್ವಹಿಸುವುದು.** | 16.06.2024 to 14.07.2024 |

***ಸೂಚನೆ:***

1. NEP ಅಡಿಯಲ್ಲಿ ಪದವಿ ತರಗತಿಗಳಿಗೆ (UUCMS) ಅಂತರ್ಜಾಲ https://uucms.karnataka.gov.in/ದ ಮುಖಾಂತರ ಮಾತ್ರ ಪ್ರವೇಶ ಪಡೆದುಕೊಳ್ಳತ್ತಕ್ಕದ್ದು. ಇತರೆ ಮಾರ್ಗಗಳ ಮುಖಾಂತರ ಪ್ರವೇಶ ಪಡೆದುಕೊಂಡಲ್ಲಿ ಮುಂದಿನ ಅಡಚಣೆಗಳಿಗೆ ಪ್ರಾಚಾರ್ಯರೇ ನೇರ ಹೊಣೆಗಾರರೆಂದು ಪರಿಗಣಿಸಲಾಗುವುದು.
2. ಮೇಲೆ ನಮೂದಿಸಿದ ದಿನಗಳು ರಜೆ ಎಂದು ಘೋಷಿಸಿದಲ್ಲಿ ತದನಂತರದ ದಿನವನ್ನು ಪರಿಗಣಿಸುವದು.
3. ಪರೀಕ್ಷೆಗಳ ವೇಳಾಪಟ್ಟಿಗಳನ್ನು ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ. ಧಾರವಾಡ ಇವರು ಕಾಲಕಾಲಕ್ಕೆ ಪ್ರಕಟಿಸುವರು.
4. ಶುಲ್ಕವನ್ನು ಕಡ್ಡಾಯವಾಗಿ (UUCMS) ಅಂತರ್ಜಾಲ https://uucms.karnataka.gov.in/ನ್ನು ಆನ್‌ಲೈನ್ ಮುಖಾಂತರ ಭರಿಸುವುದು.
5. ಪ್ರವೇಶ ಯಾದಿಯ ಜೊತೆಗೆ ಪ್ರತಿಯೊಂದು ಅನುಬಂಧ / ದಾಖಲೆ ಹಾಗೂ ಸಂಯೋಜನಾ ಅಧಿಸೂಚನೆ: 2023–24 ಗಳನ್ನು ಕಡ್ಡಾಯವಾಗಿ ಲಗತ್ತಿಸಿ ಸಲ್ಲಿಸುವದು. ತಪ್ಪಿದಲ್ಲಿ ಯಾದಿಯನ್ನು ಪರಿಗಣಿಸಲಾಗುವುದಿಲ್ಲ.

ಕುಲಸಚಿವರು